# ಅಭ್ಯಾಸ 12.1

12.1.1. ಕೊಟ್ಟಿರುವ ರೇಖಾನಕ್ಷೆಯು ಆಸ್ಪತ್ರೆಯಲ್ಲಿ ಒಬ್ಬ ರೋಗಿಯ ದೇಹದ ಉಷ್ಣತೆಯನ್ನು ಪ್ರತಿ ಗಂಟೆಗೊಮ್ಮೆ ದಾಖಲಿಸಿದ ವಿವರಗಳನ್ನು ತೋರಿಸುತ್ತಿದೆ.

(a) ಮಧ್ಯಾಹ್ನ 1 ಗಂಟೆಯಲ್ಲಿ ರೋಗಿಯ ದೇಹದ ತಾಪ ಎಷ್ಟು?

$36.5^{O}C$

(b) ಯಾವ ಸಮಯದಲ್ಲಿ ರೋಗಿಯ ದೇಹದ ತಾಪ $38.5^{O}C$ ಇತ್ತು?

ಬೆಳಗ್ಗೆ 10.50 ಮತ್ತು ಮಧ್ಯಾಹ್ನ 12 ರಲ್ಲಿ

(c)ರೋಗಿಯ ದೇಹದ ತಾಪವು ಕೊಟ್ಟಿರುವ ಅವಧಿಯಲ್ಲಿ ಎರಡು ಸಮಯಗಳಲ್ಲಿ ಒಂದೇ ಸಮನಾಗಿತ್ತು. ಆ ಎರಡು ಸಮಯಗಳು ಯಾವುವು?

ಮಧ್ಯಾಹ್ನ 1 ಮತ್ತು 2 ರಲ್ಲಿ


(d)ಅಪರಾಹ್ನ 1.30 ಸಮಯದಲ್ಲಿ ತಾಪ ಎಷ್ಟಿತ್ತು? ಈ ಉತ್ತರವನ್ನು ಹೇಗೆ ಪಡೆದಿರಿ?

$36.5^{O}C$

ಮಧ್ಯಾಹ್ನದ ಸಮಯ ಗಂಟೆ 1 ಮತ್ತು 2 ರ ಮಧ್ಯದ ರೇಖೆಯ ಮೇಲಿನ Y ಅಕ್ಷದ ಮೇಲಿನ ಬಿಂದು

(e)ಯಾವ ಅವಧಿಗಳಲ್ಲಿ, ರೋಗಿಯ ದೇಹದ ತಾಪವು ಹೆಚ್ಚಾಗುತ್ತಿದೆ?

ಬೆಳಗ್ಗೆ 9 ರಿಂದ 10, 10 ರಿಂದ 11 ಹಾಗೂ ಮಧ್ಯಾಹ್ನ 2 ರಿಂದ 3




A Project of w

12.1.2. ಕೊಟ್ಟಿರುವ ರೇಖಾನಕ್ಷೆಯು ಒಂದು ತಯಾರಿಕ ಸಂಸ್ಥೆಯ ವಾರ್ಷಿಕ ಮಾರಾಟ ಅಂಕಿಅಂಶಗಳನ್ನು ತೋರಿಸುತ್ತಿದೆ.

(a) (i) 2002 (ii) 2006 ರಲ್ಲಿ ಮಾರಾಟವು ಎಷ್ಟಿತ್ತು?

2002 ರಲ್ಲಿ 4 ಕೋಟಿ ಮತ್ತು 2006 ರಲ್ಲಿ 8 ಕೋಟಿ ರೂ ಗಳು

(b) (i) 2003 (ii) 2005 ರಲ್ಲಿ ಮಾರಾಟವು ಎಷ್ಟಿತ್ತು?

2003 ರಲ್ಲಿ 7 ಕೋಟಿ ಮತ್ತು 2005 ರಲ್ಲಿ 10 ಕೋಟಿ ರೂ ಗಳು

(c)2002 ಮತ್ತು 2006ರಲ್ಲಿ ಆದ ಮಾರಾಟಗಳ ನಡುವಿನ ವ್ಯತ್ಯಾಸವನ್ನು ಲೆಕ್ಕ ಮಾಡಿ.

ವ್ಯತ್ಯಾಸ =(8-4)=4 ಕೋಟಿ ರೂ ಗಳು

(d)ಹಿಂದಿನ ವರ್ಷದೊಂದಿಗೆ ಹೋಲಿಸಿದಾಗ, ಯಾವ ವರ್ಷದಲ್ಲಿ ಮಾರಾಟಗಳ ನಡುವಿನ ವ್ಯತ್ಯಾಸವು ಅತ್ಯಧಿಕವಾಗಿತ್ತು?


2003-2002 ನಡುವಿನ ವ್ಯತ್ಯಾಸ=7-4=3 ಕೋಟಿ ರೂ ಗಳು

2004-2003 ನಡುವಿನ ವ್ಯತ್ಯಾಸ=7-6=1 ಕೋಟಿ ರೂ ಗಳು

2005-2004 ನಡುವಿನ ವ್ಯತ್ಯಾಸ=10-6=4 ಕೋಟಿ ರೂ ಗಳು

2006-2005 ನಡುವಿನ ವ್ಯತ್ಯಾಸ =10-8=2 ಕೋಟಿ ರೂ ಗಳು

2005 ರಲ್ಲಿ ಹಿಂದಿನ ವರ್ಷಕ್ಕೆ ಹೋಲಿಸಿದಾಗ ವ್ಯತ್ಯಾಸ ಅಧಿಕವಾಗಿತ್ತು




A Project of

12.1.3. ಸಸ್ಯಶಾಸ್ತ್ರದಲ್ಲಿ ಒಂದು ಪ್ರಯೋಗಕ್ಕಾಗಿ, A ಮತ್ತು B ಗಳೆಂಬ ಎರಡು ವಿಭಿನ್ನ ಸಸ್ಯಗಳನ್ನು ಸಮಾನ ಪ್ರಯೋಗಶಾಲಾ ಪರಿಸ್ಥಿತಿಗಳಲ್ಲಿ ಬೆಳಸಲಾಗಿದೆ. ಮೂರು ವಾರಗಳವರೆಗೆ, ಪ್ರತಿ ವಾರಕ್ಕೊಮ್ಮೆ ಅವುಗಳ ಎತ್ತರಗಳನ್ನು ಅಳೆಯಲಾಗಿದೆ. ಅದರ ಫಲಿತಾಂಶಗಳನ್ನು ಈ ನಕ್ಷೆಯು ತೋರಿಸುತ್ತಿದೆ.

(a) (i) 2 ವಾರಗಳ ನಂತರ (ii) 3 ವಾರಗಳ ನಂತರ ಸಸ್ಯ - A ಯು ಎಷ್ಟು ಎತ್ತರವಿತ್ತು?

2 ವಾರಗಳ ನಂತರ 7 cm, 3 ವಾರಗಳ ನಂತರ 9 cmಎತ್ತರವಿದ್ದವು

(b) (i) 2 ವಾರಗಳ ನಂತರ (ii) 3 ವಾರಗಳ ನಂತರ ಸಸ್ಯ - B ಯು ಎಷ್ಟು ಎತ್ತರವಿತ್ತು?

2 ವಾರಗಳ ನಂತರ 7cm, 3 ವಾರಗಳ ನಂತರ 10cm ಎತ್ತರವಿದ್ದವು

(c) ಮೂರನೇ ವಾರದ ಅವಧಿಯಲ್ಲಿ, ಸಸ್ಯ-A ಯು ಎಷ್ಟು ಬೆಳೆದಿತ್ತು?

9cm-7cm=2cm ನಷ್ಟು ಬೆಳೆದಿತ್ತು

(d) ಎರಡನೇ ವಾರದ ಕೊನೆಯಿಂದ ಮೂರನೇ ವಾರದ ಕೊನೆಯವರೆಗೆ ಸಸ್ಯ-B ಯು ಎಷ್ಟು ಬೆಳೆದಿತ್ತು?

10cm-7cm=3cm ನಷ್ಟು ಬೆಳೆದಿತ್ತು

(e) ಯಾವ ವಾರದ ಅವಧಿಯಲ್ಲಿ, ಸಸ್ಯ-A ಯು ಅತ್ಯಧಿಕ ಬೆಳವಣಿಗೆ ಹೊಂದಿದೆ?

ಮೊದಲನೇ ವಾರದ ಬೆಳವಣಿಗೆ 1-0=1cm

ಎರಡನೇ ವಾರದ ಬೆಳವಣಿಗೆ 7-2=5cm

ಮೂರನೇ ವಾರದ ಬೆಳವಣಿಗೆ 9-7=2cm

ಎರಡನೇ ವಾರದ ಅವಧಿಯಲ್ಲಿ, ಸಸ್ಯ-A ಯು ಅತ್ಯಧಿಕ ಬೆಳವಣಿಗೆ ಹೊಂದಿದೆ

(f)ಯಾವ ವಾರದ ಅವಧಿಯಲ್ಲಿ, ಸಸ್ಯ-B ಯು ಅತಿಕಡಿಮೆ ಬೆಳವಣಿಗೆ ಹೊಂದಿದೆ?


ಮೊದಲನೇ ವಾರದ ಬೆಳವಣಿಗೆ 1-0=1cm

ಎರಡನೇ ವಾರದ ಬೆಳವಣಿಗೆ 7-1=6cm

ಮೂರನೇ ವಾರದ ಬೆಳವಣಿಗೆ 10-7=3cm

ಮೊದಲನೇ ವಾರದ ಅವಧಿಯಲ್ಲಿ, ಸಸ್ಯ-B ಯು ಅತಿಕಡಿಮೆ ಬೆಳವಣಿಗೆ ಹೊಂದಿದೆ

(g) ಸಸ್ಯ-A ಮತ್ತು ಸಸ್ಯ-B ಗಳು ಯಾವುದೇ ವಾರದ ಕೊನೆಯಲ್ಲಿ, ಸಮಾನ ಎತ್ತರಗಳನ್ನು ತೋರಿಸಿವೆಯೆ? ತಿಳಿಸಿ. ಎರಡನೇ ವಾರದ ಕೊನೆಯಲ್ಲಿ ಸಮಾನ ಎತ್ತರಗಳನ್ನು ಹೊಂದಿದ್ದವು.




A Project of www.e...e.org

12.1.4. ಕೊಟ್ಟಿರುವ ನಕ್ಷೆಯು ಒಂದು ವಾರದ ಅವಧಿಯಲ್ಲಿ, ಪ್ರತಿ ದಿನದ ಮುನ್ಸೂಚಿತ ತಾಪ ಮತ್ತು ನೈಜ ತಾಪದ ವಿವರಗಳನ್ನು ತೋರಿಸುತ್ತಿದೆ.

(a) ಯಾವ ಯಾವ ದಿನಗಳಲ್ಲಿ ಮುನ್ಸೂಚಿತ ತಾಪ ಮತ್ತು ನೈಜತಾಪಗಳು ಸಮನಾಗಿವೆ?

ಮಂಗಳವಾರ,ಶುಕ್ರವಾರ ಮತ್ತು ಭಾನುವಾರ ಗಳಂದು ಸಮನಾಗಿವೆ

(b) ವಾರದ ಅವಧಿಯಲ್ಲಿ, ಅತ್ಯಧಿಕ ಮುನ್ಸೂಚಿತ ತಾಪವೆಷ್ಟು?

$35^{O}C$(ಭಾನುವಾರದಂದು)

(c) ವಾರದ ಅವಧಿಯಲ್ಲಿ, ಅತಿ ಕಡಿಮೆ ನೈಜ ತಾಪವೆಷ್ಟು?

$17.5^{O}C$(ಸೋಮವಾರದಂದು)

(d) ಯಾವ ದಿನದಲ್ಲಿ, ನೈಜತಾಪವು ಮುನ್ಸೂಚಿತ ತಾಪದಿಂದ ಅತಿ ಹೆಚ್ಚು ವ್ಯತ್ಯಾಸವನ್ನು ಹೊಂದಿದೆ?

ಸೋಮವಾರದ ನೈಜತಾಪ ಮತ್ತು ಮುನ್ಸೂಚಿತ ತಾಪದ ವ್ಯತ್ಯಾಸ

$=17.5-15=2.5^{O}C$

ಮಂಗಳವಾರದ ನೈಜತಾಪ ಮತ್ತು ಮುನ್ಸೂಚಿತ ತಾಪದ ವ್ಯತ್ಯಾಸ

$=20-20=0^{O}C$

ಭುಧವಾರದ ನೈಜತಾಪ ಮತ್ತು ಮುನ್ಸೂಚಿತ ತಾಪದ ವ್ಯತ್ಯಾಸ

$=30-25=5^{O}C$

ಗುರುವಾರದ ನೈಜತಾಪ ಮತ್ತು ಮುನ್ಸೂಚಿತ ತಾಪದ ವ್ಯತ್ಯಾಸ

$=22.5-15=7.5^{O}C$

ಶುಕ್ರವಾರದ ನೈಜತಾಪ ಮತ್ತು ಮುನ್ಸೂಚಿತ ತಾಪದ ವ್ಯತ್ಯಾಸ

$=15-15=0^{O}C$


ಶನಿವಾರದ ನೈಜತಾಪ ಮತ್ತು ಮುನ್ಸೂಚಿತ ತಾಪದ ವ್ಯತ್ಯಾಸ

$=30-25=5^{O}C$

ಭಾನುವಾರದ ನೈಜತಾಪ ಮತ್ತು ಮುನ್ಸೂಚಿತ ತಾಪದ ವ್ಯತ್ಯಾಸ

$=35-35=0^{O}C$

ಗುರುವಾರದಂದು ವ್ಯತ್ಯಾಸ ಜಾಸ್ತಿ ಇದೆ.




12.1.5. ರೇಖಾನಕ್ಷೆಗಳನ್ನು ಎಳೆಯಲು ಕೆಳಗಿನ ಕೋಷ್ಟಕಗಳನ್ನು ಬಳಸಿ.

(b)ಒಂದು ಪರ್ವತ ಪ್ರದೇಶದ ನಗರವು, ಬೇರೆ ಬೇರೆ ವರ್ಷಗಳಲ್ಲಿ, ಅತ್ಯಧಿಕ ಹಿಮಪಾತವನ್ನು ಹೊಂದಿದ ದಿನಗಳ ಸಂಖ್ಯೆ.

| ವರ್ಷ | 2003 | 2004 | 2005 | 2006 |
|---|---|---|---|---|
| ದಿನಗಳು | 8 | 10 | 5 | 12 |

ಪ್ರಮಾಣ:

Y ಅಕ್ಷ 1 ಸೆ.ಮೀ =2 ದಿನಗಳು




A Project of www.es

12.1.6. ಒಬ್ಬ ಖಾಸಗಿ ಅಂಚೆ ವ್ಯಕ್ತಿಯು ಒಂದು ಪಟ್ಟಣದಿಂದ ಪಕ್ಕದಲ್ಲಿನ ಮತ್ತೊಂದು ಉಪನಗರದಲ್ಲಿರುವ ಒಬ್ಬ ವ್ಯಾಪಾರಿಗೆ ಪಾರ್ಸಲ್ ತಲುಪಿಸಲು ಸೈಕಲ್‌ನಲ್ಲಿ ಹೋಗುತ್ತಾನೆ. ಅವನ ಕಛೇರಿಯಿಂದ, ಬೇರೆ ಬೇರೆ ಸಮಯಗಳಲ್ಲಿ ಅವನಿಗಿರುವ ದೂರವನ್ನು ಕೆಳಗಿನ ನಕ್ಷೆಯು ತೋರಿಸುತ್ತಿದೆ.

(a) ಕಾಲದ ಅಕ್ಷದಲ್ಲಿ ತೆಗೆದುಕೊಂಡಿರುವ ಪ್ರಮಾಣಾನುಪಾತ (ಸ್ಕೇಲ್) ಯಾವುದು?

4 ಏಕಮಾನ=1 ಗಂಟೆ

(b) ವ್ಯಕ್ತಿಯು ಪ್ರಯಾಣಕ್ಕೆ ತೆಗೆದುಕೊಂಡ ಒಟ್ಟು ಸಮಯವೆಷ್ಟು?

8 ಗಂಟೆಯಿಂದ 11.30 ರ ವರೆಗೆ= 3½ ಗಂಟೆಗಳು

(c) ಪಟ್ಟಣದಿಂದ ವ್ಯಾಪಾರಿಯು ಇರುವ ದೂರ ಎಷ್ಟು?


22 km

(d)ವ್ಯಕ್ತಿಯು ತನ್ನ ಪ್ರಯಾಣದ ದಾರಿಯಲ್ಲಿ ವಿಶ್ರಾಂತಿ ಪಡೆದಿರುವನೆ? ವಿವರಿಸಿ.





10 ಗಂಟೆಯಿಂದ 10.30 ರ ವರೆಗೆ ವಿಶ್ರಾಂತಿ ಪಡೆದಿದ್ದಾನೆ

(e) ಯಾವ ಅವಧಿಯಲ್ಲಿ ಅವನು ಅತ್ಯಧಿಕ ವೇಗದಲ್ಲಿ ಸೈಕಲ್ ಓಡಿಸಿದ್ದಾನೆ?

8 ಗಂಟೆಯಿಂದ 9 ರ ವರೆಗೆ 10 km ಸೈಕಲ್ ಓಡಿಸಿದ್ದಾನೆ, ಆನಂತರ ಅವನು ಓಡಿಸಿದ್ದು ಕ್ರಮವಾಗಿ 6km ಮತ್ತು 6 km ಗಳು ಮಾತ್ರ



12.1.7. ಕಾಲ ತಾಪದ ರೇಖಾನಕ್ಷೆಯು ಕೆಳಗೆ ಕೊಟ್ಟಿರುವ ರೀತಿಯಲ್ಲಿ ಇರುವ ಸಾಧ್ಯತೆ ಇದೆಯೇ? ನಿಮ್ಮ ಉತ್ತರವನ್ನು ಸಮರ್ಥಿಸಿ.

| ನಕ್ಷೆ | ಉತ್ತರ |
|---|---|
|  | ಸಾಧ್ಯವಿದೆ<br>ಸಮಯ ಜಾಸ್ತಿ ಆದಂತೆ ತಾಪ ಜಾಸ್ತಿ ಆಗುತ್ತಿದೆ |
|  | ಸಾಧ್ಯವಿದೆ<br>ಸಮಯ ಕಡಿಮೆ ಆದಂತೆ ತಾಪ ಕಡಿಮೆ ಆಗುತ್ತಿದೆ |
|  | ಸಾಧ್ಯವಿಲ್ಲ<br>ಒಂದೇ ಸಮಯದಲ್ಲಿ ಬೇರೆ ಬೇರೆ ತಾಪ ತೋರಿಸುತ್ತಿದೆ |
|  | ಸಾಧ್ಯವಿದೆ<br>ಎಲ್ಲಾ ಸಮಯದಲ್ಲೂ ಒಂದೇ ತಾಪ ತೋರಿಸುತ್ತಿದೆ |

A Project of www.eShale.org

## ಅಭ್ಯಾಸ 12.2

12.2.1. ಕೆಳಗೆ ಕೊಟ್ಟಿರುವ ಬಿಂದುಗಳನ್ನು ನಕ್ಷಾಕಾಗದದ ಮೇಲೆ ಗುರುತಿಸಿ. ಅವುಗಳು ಒಂದೇ ರೇಖೆಯ ಮೇಲಿವೆಯೇ? ಪರೀಕ್ಷಿಸಿ.

(a) A (4, 0), B (4, 2), C(4, 6), D(4, 2.5)


ಈ ಬಿಂದುಗಳು ಒಂದೇ ರೇಖೆಯ ಮೇಲಿವೆ

(b) P (1, 1), Q (2, 2), R(3, 3), S(4, 4)

ಈ ಬಿಂದುಗಳು ಒಂದೇ ರೇಖೆಯ ಮೇಲಿವೆ


(c) K (2, 3), L (5, 3), M5, 5), N(2, 5)

ಈ ಬಿಂದುಗಳು ಒಂದೇ ರೇಖೆಯ ಮೇಲಿಲ್ಲ. ಅವು ಆಯತದ ಶೃಂಗಬಿಂದುಗಳಾಗಿವೆ.




12.2.2. (2,3) ಮತ್ತು (3,2)ಗಳ ಮೂಲಕ ಹಾದು ಹೋಗುವ ಸರಳರೇಖೆಯನ್ನು ಎಳೆಯಿರಿ. ಈ ಸರಳರೇಖೆಯು X-ಅಕ್ಷ ಮತ್ತು Y-ಅಕ್ಷಗಳನ್ನು ಸಂಧಿಸುವ ಬಿಂದುಗಳ ನಿರ್ದೇಶಾಂಕಗಳನ್ನು ಕಂಡುಹಿಡಿಯಿರಿ.

ಸರಳರೇಖೆಯು X-ಅಕ್ಷ ಮತ್ತು Y-ಅಕ್ಷಗಳನ್ನು ಸಂಧಿಸುವ ಬಿಂದುಗಳು ಕ್ರಮವಾಗಿ (5, 0) ಮತ್ತು (0, 5).





A Project of www

12.2.3. ಪಕ್ಕದ ಚಿತ್ರದಲ್ಲಿರುವ ಪ್ರತಿಯೊಂದು ಶೃಂಗಬಿಂದುವಿನ ನಿರ್ದೇಶಾಂಕಗಳನ್ನು ಬರೆಯಿರಿ.

O(0,0),A(2,0),B(2,3),C(0,3)

P(4,3),Q(6,1),R(6,5),S(4,7)

K(10,5),L(7,7),M(10,8)




A Project of www.eShale

12.2.4. ಸರಿಯೇ ಅಥವಾ ತಪ್ಪೇ ತಿಳಿಸಿ. ತಪ್ಪು ಇರುವುದನ್ನು ಸರಿಪಡಿಸಿ ಬರೆಯಿರಿ.

| | |
|---|---|
| (i) X - ನಿರ್ದೇಶಾಂಕ ಸೊನ್ನೆ ಮತ್ತು Y - ನಿರ್ದೇಶಾಂಕ ಸೊನ್ನೆ ಅಲ್ಲದಿರುವ ಒಂದು ಬಿಂದುವು Y - ಅಕ್ಷದ ಮೇಲಿರುತ್ತದೆ | ಸರಿ |
| (ii) Y - ನಿರ್ದೇಶಾಂಕವು 0 ಮತ್ತು x - ನಿರ್ದೇಶಾಂಕ 5 ಆಗಿರುವ ಬಿಂದುವು Y - ಅಕ್ಷದ ಮೇಲಿರುತ್ತದೆ. | ತಪ್ಪು. X - ಅಕ್ಷದ ಮೇಲಿರುತ್ತದೆ |
| (iii) ಮೂಲಬಿಂದುವಿನ ನಿರ್ದೇಶಾಂಕಗಳು (0, 0) ಆಗಿರುತ್ತದೆ. | ಸರಿ |

## ಅಭ್ಯಾಸ 12.3

12.3.1. ಕೆಳಗೆ ಕೊಟ್ಟಿರುವ ಕೋಷ್ಟಕದಲ್ಲಿನ ಬೆಲೆಗಳಿಗೆ, ಸೂಕ್ತವಾದ ಪ್ರಮಾಣದೊಂದಿಗೆ ನಕ್ಷೆಗಳನ್ನು ಎಳೆಯಿರಿ.


(a) ಸೇಬು ಹಣ್ಣಿನ ಬೆಲೆ:

| | | | | | |
|---|---|---|---|---|---|
| ಸೇಬು ಹಣ್ಣಿನ ಸಂಖ್ಯೆ | 1 | 2 | 3 | 4 | 5 |
| ಬೆಲೆ (ರೂ ಗಳಲ್ಲಿ) | 5 | 10 | 15 | 20 | 25 |

ಪ್ರಮಾಣ:

X ಅಕ್ಷ 1 ಸೆ.ಮೀ =1 ಹಣ್ಣು.

Y ಅಕ್ಷ 1 ಸೆ.ಮೀ =5 ರೂ.




(b) ಕಾರು ಕ್ರಮಿಸಿದ ದೂರ: ಸಮಯ (ಗಂಟೆಗಳಲ್ಲಿ)

| | | | | |
|---|---|---|---|---|
| ಸಮಯ | 6 am | 7 am | 8 am | 9 am |
| ಕ್ರಮಿಸಿದ ದೂರ (Km) | 40 | 80 | 120 | 160 |


(i) 7.30 am ನಿಂದ 8 am ವರೆಗಿನ ಅವಧಿಯಲ್ಲಿ ಕಾರು ಎಷ್ಟು ದೂರವನ್ನು ಕ್ರಮಿಸುವುದು? =(120-100)=20 km

(ii) ಪ್ರಯಾಣದ ಆರಂಭದ ಸಮಯದಿಂದ, ಕಾರು 100 ಕಿ.ಮೀ ದೂರ ಕ್ರಮಿಸಿದಾಗ ಸಮಯ ಎಷ್ಟು ಗಂಟೆ ಆಗಿರುತ್ತದೆ? 7.30 am

ಪ್ರಮಾಣ:

X ಅಕ್ಷ 1 ಸೆ.ಮೀ $= \frac{1}{2}$ ಗಂ.

Y ಅಕ್ಷ 1 ಸೆ.ಮೀ =20 ಕಿ.ಮೀ




A Project of www.

(c) ಒಂದು ವರ್ಷದಲ್ಲಿ ಠೇವಣಿ ಮೇಲಿನ ಬಡ್ಡಿ:

| ಠೇವಣಿ (ರೂ.) | 1000 | 2000 | 3000 | 4000 | 5000 |
|---|---|---|---|---|---|
| ಸರಳ ಬಡ್ಡಿ (ರೂ.) | 80 | 160 | 240 | 320 | 400 |

(i) ನಕ್ಷೆಯು ಮೂಲಬಿಂದುವಿನ ಮೂಲಕ ಹಾದು ಹೋಗುವುದೆ?

ಹೌದು.

(ii) ನಕ್ಷೆಯನ್ನು ಬಳಸಿ, ರೂ 2500 ಗಳಿಗೆ ಒಂದು ವರ್ಷದಲ್ಲಿ ದೊರೆಯುವ ಸರಳಬಡ್ಡಿ ಕಂಡುಹಿಡಿಯಿರಿ.

ರೂ 2500 ಗಳಿಗೆ ಒಂದು ವರ್ಷದಲ್ಲಿ ದೊರೆಯುವ ಸರಳಬಡ್ಡಿ ರೂ.200.


(iii) ಒಂದು ವರ್ಷದಲ್ಲಿ ರೂ 280 ಗಳನ್ನು ಬಡ್ಡಿಯಾಗಿ ಗಳಿಸಲು, ಎಷ್ಟು ಮೊತ್ತದ ಹಣವನ್ನು ಠೇವಣಿಯಾಗಿ ಇಡಬೇಕಾಗುತ್ತದೆ?

ರೂ.3500 ನ್ನು ಠೇವಣಿಯಾಗಿ ಇಡಬೇಕಾಗುತ್ತದೆ

ಪ್ರಮಾಣ:

X ಅಕ್ಷ 1 ಸೆ.ಮೀ =500 ರೂ.

Y ಅಕ್ಷ 1 ಸೆ.ಮೀ =40 ರೂ.





A Project of www

12.3.2. ಕೆಳಗಿನವುಗಳಿಗೆ ನಕ್ಷೆಯನ್ನು ಎಳೆಯಿರಿ.


| ಚೌಕದ ಬಾಹು(cm) | 2 | 3 | 3.5 | 5 | 6 |
|---|---|---|---|---|---|
| ಸುತ್ತಳತೆ (cm) | 8 | 12 | 14 | 20 | 24 |

(i) ಇದು ರೇಖಾತ್ಮಕ ನಕ್ಷೆ ಆಗಿದೆಯೆ? ಹೌದು.




| ಚೌಕದ ಬಾಹು(cm) | 2 | 3 | 4 | 5 | 6 |
|---|---|---|---|---|---|
| ವಿಸ್ತೀರ್ಣ (Sq.cm) | 4 | 9 | 16 | 25 | 36 |

(ii) ಇದು ರೇಖಾತ್ಮಕ ನಕ್ಷೆ ಆಗಿದೆಯೆ? ಇಲ್ಲ.ವಕ್ರರೇಖೆಯಾಗಿದೆ.





A Project of www.e

(b) ಬೇರೆ ಬೇರೆ ವರ್ಷಗಳಲ್ಲಿ ಒಂದು ಹಳ್ಳಿಯಲ್ಲಿನ ಪುರುಷರು ಮತ್ತು ಮಹಿಳೆಯರ ಜನಸಂಖ್ಯೆ (ಸಾವಿರಗಳಲ್ಲಿ)

| ವರ್ಷ | 2003 | 2004 | 2005 | 2006 | 2007 |
|---|---|---|---|---|---|
| ಪುರುಷರ ಸಂಖ್ಯೆ | 12 | 12.5 | 13 | 13.2 | 13.5 |
| ಮಹಿಳೆಯರ ಸಂಖ್ಯೆ | 11.3 | 11.9 | 13 | 13.6 | 12.8 |

ಪ್ರಮಾಣ:

Y ಅಕ್ಷ 1 ಸೆ.ಮೀ =2000 ಜನರು




A Project of www